Email: kolardccb@yahoo.com phone: 08152-222042

# ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ

(ಅಂಚೆ ಪೆಟ್ಟಿಗೆ ಸಂಖ್ಯೆ 11, ಡಿ.ಸಿ.ಸಿ. ಬ್ಯಾಂಕ್ ರಸ್ತೆ, ಕೋಲಾರ)

ಸಂಖ್ಯೆ: ಕೆ.ಸಿ.ಡಿ.ಸಿ.ಸಿಬಿ / ಆ ಮತ್ತು ಸಿ/222 /2023-24 ದಿನಾಂಕ: 12.04.2023

## ತಿದ್ದೋಲೆ

ಈ ಕಛೇರಿಯ ಕ್ರಮ ಸಂಖ್ಯೆ : ಕೋ.ಚಿ.ಡಿ.ಸಿ.ಸಿ.ಬಿ / ಆ ಮತ್ತು ಸಿ / ನೇರ ನೇಮಕಾತಿ / 2022-23 / 12205 ದಿನಾಂಕ 28.02.2023 ರ ರೀತ್ಯಾ ಅನ್‌ಲೈನ್‌ನಲ್ಲಿ ಹೊರಡಿಸಿರುವ ನೇಮಕಾತಿ ಪ್ರಕಟಣೆಯ ಕ್ರಮ ಸಂಖ್ಯೆ (6) ರಲ್ಲಿ ನಮೂದಿಸಿರುವ ಆಯ್ಕೆ ವಿಧಾನದ ಕೆಲವು ಪ್ಯಾರಾಗಳನ್ನು " ವಾಹನ ಚಾಲಕರು ಮತ್ತು ಜವಾನರ ಹುದ್ದೆಗಳಿಗೆ ಮಾತ್ರ ಅನ್ವಯವಾಗುವಂತೆ " ದಿನಾಂಕ 12.04.2023 ರ ನೇಮಕಾತಿ ಸಮಿತಿ ಸಭೆಯ ತೀರ್ಮಾನದನುಸಾರ ಹಾಗೂ ಬ್ಯಾಂಕು ಕಾಯ್ದಿರಿಸಿಕೊಂಡಿರುವ ಅಧಿಕಾರದನ್ವಯ ಬ್ಯಾಂಕಿನ ಆಡಳಿತ ಮಂಡಲಿಯ ಘಟನೋತ್ತರ ಅನುಮೋದನೆಗೊಳಪಟ್ಟು ಈ ಕೆಳಗಿನಂತೆ ಮಾರ್ಪಾಡು ಮಾಡಲಾಗಿರುತ್ತದೆ

| ಹುದ್ದೆ | ದಿನಾಂಕ 28.02.2023 ರಂದು ಹೊರಡಿಸಿರುವ ಮೂಲ ಪ್ರಕಟಣೆಯಲ್ಲಿದ್ದಂತೆ | ತಿದ್ದುಪಡಿಯ ನಂತರ |
|---|---|---|
| ವಾಹನ ಚಾಲಕರು | ಬ್ಯಾಂಕಿಗೆ ಬರುವ ಒಟ್ಟು ಅರ್ಜಿಗಳನ್ನು ಪರಿಶೀಲಿಸಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಜ್ಯೇಷ್ಠತಾ ಆಧಾರದ ಮೇಲೆ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆಗೆ ಅರ್ಹತಾ ಪಟ್ಟಿಯನ್ನು ತಯಾರಿಸಿ 1 : 5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ವಾಹನ ಚಾಲನಾ ಪರೀಕ್ಷೆಗೆ ಕರೆಯಲಾಗುವುದು | ವಾಹನ ಚಾಲಕರ ಹುದ್ದೆಗೆ ನಿಗದಿಪಡಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಮತ್ತು ಗರಿಷ್ಠ ವಯೋಮಿತಿ ಮೀರದಿದ್ದಲ್ಲಿ ಅಂತಹ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯಲಾಗುವುದು<br><br>ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಂಡ 100 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು ಹೊಂದಿರುತ್ತದೆ<br>**ಕನ್ನಡ ಭಾಷೆ 50 ಅಂಕಗಳು, ಸಾಮಾನ್ಯ ಅಂಗ್ಲ ಭಾಷೆ 25 ಅಂಕಗಳು, ಸಾಮಾನ್ಯ ಜ್ಞಾನ 25 ಅಂಕಗಳು** |

The Kolar & Chikballapura D.C.C. Bank ltd. Reg.No. ARK-492 Dt: 24-12-1954 Kolar.

Chief Executive Officer
The Kolar & Chikballapura
D.C.C. Bank Ltd., Kolar-563 101

| | | |
|---|---|---|
| | | ಲಿಖಿತ ಪರೀಕ್ಷೆಯನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಸಮಿತಿಯಿಂದ ಆಯ್ಕೆ ಮಾಡಲಿರುವ ಬಾಹ್ಯಮೂಲ ಸಂಸ್ಥೆಯಿಂದ ನಡೆಸಲಾಗುವುದು ಮತ್ತು ಉತ್ತರ ಪತ್ರಿಕೆಯ ಮೌಲ್ಯ ಮಾಪನವನ್ನು ಲಿಖಿತ ಪರೀಕ್ಷೆ ನಡೆಸಿದ ಬಾಹ್ಯ ಮೂಲ ಸಂಸ್ಥೆಯಿಂದಲೇ ಮಾಡಿಸಲಾಗುವುದು.<br>ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ನಿಗಧಿಪಡಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಅರ್ಹ ಅಭ್ಯರ್ಥಿಗಳನ್ನು 1 : 5 ರ ಅನುಪಾತದಲ್ಲಿ ವಾಹನ ಚಾಲನಾ ಪ್ರವೀಣತೆಯ ಪರೀಕ್ಷೆಗೆ ಕರೆಯಲಾಗುವುದು |
| .ಜವಾನರು | ಬ್ಯಾಂಕಿಗೆ ಬರುವ ಒಟ್ಟು ಅರ್ಜಿಗಳನ್ನು ಪರಿಶೀಲಿಸಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಜ್ಯೇಷ್ಠತಾ ಆಧಾರದ ಮೇಲೆ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆಗೆ ಅರ್ಹತಾ ಪಟ್ಟಿಯನ್ನು ತಯಾರಿಸಿ 1 : 5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು | .ಜವಾನರ ಹುದ್ದೆಗೆ ನಿಗಧಿಪಡಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಮತ್ತು ಗರಿಷ್ಠ ವಯೋಮಿತಿ ಮೀರದಿದ್ದಲ್ಲಿ ಅಂತಹ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯಲಾಗುವುದು<br><br>ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಂಡ 100 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು ಹೊಂದಿರುತ್ತದೆ<br>**ಕನ್ನಡ ಭಾಷೆ 50 ಅಂಕಗಳು, ಸಾಮಾನ್ಯ ಅಂಗ್ಲ ಭಾಷೆ 25 ಅಂಕಗಳು, ಸಾಮಾನ್ಯ ಜ್ಞಾನ 25 ಅಂಕಗಳು**<br>ಲಿಖಿತ ಪರೀಕ್ಷೆಯನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಸಮಿತಿಯಿಂದ ಆಯ್ಕೆ ಮಾಡಲಿರುವ ಬಾಹ್ಯಮೂಲ ಸಂಸ್ಥೆಯಿಂದ ನಡೆಸಲಾಗುವುದು ಮತ್ತು ಉತ್ತರ ಪತ್ರಿಕೆಯ ಮೌಲ್ಯ ಮಾಪನವನ್ನು ಲಿಖಿತ ಪರೀಕ್ಷೆ ನಡೆಸಿದ |

The Kolar & Chikballapura ... Reg.No. ARK-492 Dt.24-12-1954 ★ Kolar ★

Chief Executive Officer
The Kolar & Chikballapura
D.C.C. Bank Ltd., Kolar-563 101

| | | |
|---|---|---|
| | | ಬಾಹ್ಯ ಮೂಲ ಸಂಸ್ಥೆಯಿಂದಲೇ ಮಾಡಿಸಲಾಗುವುದು.<br><br>ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ನಿಗಧಿಪಡಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಅರ್ಹ ಅಭ್ಯರ್ಥಿಗಳನ್ನು 1 : 5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. |
| | ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಶೇಕಡಾವಾರು ಪ್ರಮಾಣವನ್ನು ಶೇಕಡ 85 ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಶೇಕಡಾವಾರು ಪ್ರಮಾಣದ ಜೊತೆಗೆ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಅರ್ಹತಾ ಪಟ್ಟಿಯನ್ನು ( Merit List ) ತಯಾರಿಸಿ ಮೀಸಲಾತಿ ನಿಯಮಗಳನ್ನು ಅನುಸರಿಸಿ, ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಮಾನ್ಯ ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್.ಸಿ.ಎಸ್ / ಆರ್.ಎಸ್.ಆರ್ / ಎಕ್ಸ್ ಎಂಸಿ / 41 / 2020–21 ದಿನಾಂಕ 16.09.2020 ನ್ನು ಪಾಲನೆ ಮಡುವ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು | ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ಇಳಿಸಲಾಗುವುದು ಮತ್ತು ಈ ರೀತಿ ಕಡಿತ ಮಾಡಲಾದ ನಂತರ ಪಡೆಯಲಾದ ಅಂಕಗಳು ಮತ್ತು ಸಂದರ್ಶನದಲ್ಲಿ ಪಡೆಯಲಾದ ಅಂಕಗಳನ್ನು ಒಟ್ಟು ಗೂಡಿಸಿ ಅರ್ಹತಾ ಪಟ್ಟಿಯನ್ನು ( Merit List ) ತಯಾರಿಸಿ ಮೀಸಲಾತಿ ನಿಯಮಗಳನ್ನು ಅನುಸರಿಸಿ, ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಮಾನ್ಯ ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್.ಸಿ.ಎಸ್ / ಆರ್.ಎಸ್.ಆರ್ / ಎಕ್ಸ್ ಎಂಸಿ / 41 / 2020–21 ದಿನಾಂಕ 16.09.2020 ನ್ನು ಪಾಲನೆ ಮಡುವ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು |

ಈ ಮೇಲಿನಂತೆ ನೇಮಕಾತಿ ಪ್ರಕಟಣೆಯನ್ನು ಪರಿಷ್ಕರಿಸಲಾಗಿರುವುದರಿಂದ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ https://virtualofficeerp.com/kcdccb_2023/ ರಲ್ಲಿ ನೀಡಿರುವ ಲಿಂಕ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಮತ್ತು ಅರ್ಜಿ ಶುಲ್ಕ ಪಾವತಿಗೆ 7 ದಿನಗಳ ಕಾಲಾವಧಿಯನ್ನು ಈ ಕೆಳಗಿನಂತೆ ನಿಗಧಿಪಡಿಸಿದೆ

| | |
|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭಿಕ ದಿನಾಂಕ | 13.04.2023 |
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ | 19.04.2023 |
| ಅರ್ಜಿ ಶುಲ್ಕ ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ | 19.04.2023 |

The Kolar & Chickballapura D.C.C. Bank ltd.
Reg.No. ARK-492 Dt:24-12-1954
Kolar

Chief Executive Officer
The Kolar & Chikballapura
D.C.C. Bank Ltd., Kolar-563 101

ನೇಮಕಾತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಿರುವ ವಾಹನ ಚಾಲಕರು ಮತ್ತು ಜವಾನರ ಒಟ್ಟು ಹುದ್ದೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ದಿನಾಂಕ 28.02.2023 ರ ಪ್ರಕಟಣೆಯನುಸಾರ ಈ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಈಗಾಗಲೇ ಅರ್ಜಿ ಸಲ್ಲಿಸಿರುವವರು ಹೊಸದಾಗಿ ಎರಡನೆ ಬಾರಿ ಅರ್ಜಿ ಸಲ್ಲಿಸುವ ಅಗತ್ಯತೆ ಇರುವುದಿಲ್ಲ. ಆದರೆ 100 ಅಂಕಗಳ ಲಿಖಿತ ಪರೀಕ್ಷೆಗೆ ಪೂರ್ವ ತಯಾರಿ ಮಾಡಿಕೊಳ್ಳಲು ಈ ಮೂಲಕ ತಿಳಿಯಪಡಿಸಿದೆ. ಮೂಲ ಪ್ರಕಟಣೆಯಲ್ಲಿ ತಿಳಿಸಿರುವ ಇನ್ನಿತರೆ ಷರತ್ತುಗಳು, ಆಯ್ಕೆ ವಿಧಾನಗಳು ಅನ್ವಯವಾಗುವಷ್ಟು ಮಟ್ಟಿಗೆ ಯಥಾ ರೀತಿ ಮುಂದುವರೆಯಲಿದೆ. ಈ ಮೇಲಿನ ತಿದ್ದೋಲೆಯಂತೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯಿಂದ ಹೊರಡಿಸಿದ ಮೂಲ ನೇಮಕಾತಿ ಪ್ರಕಟಣೆ ಕೋ.ಚಿ.ಡಿ.ಸಿ.ಸಿ.ಬಿ / ಆ ಮತ್ತು ಸಿ / ನೇರ ನೇಮಕಾತಿ / 2022-23 / 12205 ದಿನಾಂಕ 28.02.2023 ನ್ನು ಓದಿ ತಿಳಿಯತಕ್ಕದ್ದು.

The Kolar & Chickballapura D.C.C. Bank ltd. Reg.No. ARK-492 Dt:-24-12-1954 Kolar.

| | |
|---|---|
| (ಬಿ.ಜಿ.ಮಂಜುಳ) | (ಬ್ಯಾಲಹಳ್ಳಿ ಎಂ.ಗೋವಿಂದಗೌಡ) |
| ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಆಯ್ಕೆ ಸಮಿತಿ, | ಅಧ್ಯಕ್ಷರು, ಸಿಬ್ಬಂದಿ ನೇಮಕಾತಿ ಆಯ್ಕೆ ಸಮಿತಿ, |
| ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರ) | ಹಾಗೂ ಅಧ್ಯಕ್ಷರು, |
| ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ. ಬ್ಯಾಂಕ್ ನಿ., ಕೋಲಾರ. | ಕೋಲಾರ ಮತ್ತು ಚಿಕ್ಕಬಳ್ಳಾಪುರಡಿ.ಸಿ.ಸಿ. ಬ್ಯಾಂಕ್ ನಿ., ಕೋಲಾರ. |

Email: kolardccb@yahoo.com phone: 08152-222042

# ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ

(ಅಂಚೆ ಪೆಟ್ಟಿಗೆ ಸಂಖ್ಯೆ 11, ಡಿ.ಸಿ.ಸಿ. ಬ್ಯಾಂಕ್ ರಸ್ತೆ, ಕೋಲಾರ)

---

ಸಂಖ್ಯೆ: ಕೆ.ಸಿ.ಡಿ.ಸಿ.ಸಿಬಿ / ಆ ಮತ್ತು ಸಿ/222 /2023-24 ದಿನಾಂಕ: 12.04.2023

## ತಿದ್ದೋಲೆ

ಈ ಕಛೇರಿಯ ಕ್ರಮ ಸಂಖ್ಯೆ : ಕೋ.ಚಿ.ಡಿ.ಸಿ.ಸಿ.ಬಿ / ಆ ಮತ್ತು ಸಿ / ನೇರ ನೇಮಕಾತಿ / 2022-23 / 12205 ದಿನಾಂಕ 28.02.2023 ರ ರೀತ್ಯಾ ಅನ್‌ಲೈನ್‌ನಲ್ಲಿ ಹೊರಡಿಸಿರುವ ನೇಮಕಾತಿ ಪ್ರಕಟಣೆಯ ಕ್ರಮ ಸಂಖ್ಯೆ (6) ರಲ್ಲಿ ನಮೂದಿಸಿರುವ ಆಯ್ಕೆ ವಿಧಾನದ ಸಂಬಂಧ ದಿನಾಂಕ 12.04.2023 ರಂದು ನಡೆದ ನೇಮಕಾತಿ ಸಮಿತಿ ಸಭೆಯಲ್ಲಿ ವಾಹನ ಚಾಲಕರು ಮತ್ತು ಜವಾನರ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಎರಡೂ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ತಿದ್ದೋಲೆಯನ್ನು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ https://virtualofficeerp.com/kcdccb_2023/ ರಲ್ಲಿ ದಿನಾಂಕ 13.04.2023 ರಂದು ಪ್ರಕಟಿಸಲಿದ್ದು ಅದರಂತೆ ಈ ಹುದ್ದೆಗಳಿಗೆ ಹೊಸದಾಗಿ ಅರ್ಜಿ ಸಲ್ಲಿಸಲು ದಿನಾಂಕವನ್ನು ಸಹ ವಿಸ್ತರಿಸಲಾಗಿದೆ. ಈ ಸದಾವಕಾಶವನ್ನು ಅರ್ಹ ಅಭ್ಯರ್ಥಿಗಳು ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ತಿಳಿಸಿದೆ.

(ಬಿ.ಜಿ.ಮಂಜುಳ)
ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಆಯ್ಕೆ ಸಮಿತಿ,
ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರ)
ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ. ಬ್ಯಾಂಕ್ ನಿ., ಕೋಲಾರ.

(ಬ್ಯಾಲಹಳ್ಳಿ ಎಂ.ಗೋವಿಂದಗೌಡ)
ಅಧ್ಯಕ್ಷರು, ಸಿಬ್ಬಂದಿ ನೇಮಕಾತಿ ಆಯ್ಕೆ ಸಮಿತಿ,
ಹಾಗೂ ಅಧ್ಯಕ್ಷರು,
ಕೋಲಾರ ಮತ್ತು ಚಿಕ್ಕಬಳ್ಳಾಪುರಡಿ.ಸಿ.ಸಿ. ಬ್ಯಾಂಕ್ ನಿ., ಕೋಲಾರ.

The Kolar & Chickballapura D.C.C. Bank ltd.
Reg.No. ARK-492 Dt:-24-12-1954
Kolar.